CAREERINDIA

Roll No. | | | | | | | | | | | Serial No. of Q. C. A. B.

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ]
Total No. of Questions : 56 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 85-K**
**Code No. : 85-K**

# ವಿಷಯ : ಸಮಾಜ ವಿಜ್ಞಾನ
# Subject : SOCIAL SCIENCE

( ಕನ್ನಡ ಭಾಷಾಂತರ )
( Kannada Version )

ದಿನಾಂಕ : 07. 04. 2014 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 07. 04. 2014
[ Time : 9-30 A.M. to 12-45 P.M
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | **Total Marks** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.careerindia.com

CAREERINDIA



*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ದುಲೀಪ್ ಸಿಂಗ್‌ನು ಬ್ರಿಟಿಷರಿಗೆ ಕೋಹಿನೂರ್ ವಜ್ರವನ್ನು ನೀಡಲು ಕಾರಣವೇನೆಂದರೆ

(A) ದುಲೀಪ್ ಸಿಂಗ್‌ನಿಗೆ ವಿಶ್ರಾಂತಿ ವೇತನ ನೀಡಲಾಯಿತು

(B) ಅವನು ಇಂಗ್ಲಿಷರ ಅಧೀನ ರಾಜನಾದನು

(C) ಸಿಖ್ ರಾಜ್ಯದ ಉಸ್ತುವಾರಿಯ ಜವಾಬ್ದಾರಿಯನ್ನು ದುಲೀಪ್ ಸಿಂಗ್‌ನಿಗೆ ವಹಿಸಿದರು

(D) ಅವನು ಬ್ರಿಟಿಷರನ್ನು ಸೋಲಿಸಿದನು

*ಉತ್ತರ :* ______________________________



www.careerindia.com

CAREERINDIA



2. ರೈತರ ಭೂಮಿಯ ಹಕ್ಕನ್ನು ಧೃಡಪಡಿಸಿದ ಭೂಕಂದಾಯ ಪದ್ಧತಿ

(A) ರೈತವಾರಿ ಪದ್ಧತಿ

(B) ಜಮೀನ್ದಾರಿ ಪದ್ಧತಿ

(C) ಖಾಯಂ ಗುತ್ತಾ ಪದ್ಧತಿ

(D) ಚೌತಾಯಿ ಕಂದಾಯ ಪದ್ಧತಿ

*ಉತ್ತರ :* ______________________

3. ಕ್ರಿ.ಶ. 1912 ರಲ್ಲಿ ಚೀನಾದ ಜನತೆ ದಂಗೆ ಎದ್ದು ಮಂಚುಗಳ ಆಳ್ವಿಕೆಯನ್ನು ಕೊನೆಗೊಳಿಸಲು ಕಾರಣವೇನೆಂದರೆ

(A) ಅವರು ತಮ್ಮ ಅಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು

(B) ಇಂಗ್ಲೆಂಡಿನ ಜೊತೆ ವ್ಯಾಪಾರ ಸಂಬಂಧ ಹೊಂದಿದರು

(C) ಮಂಚು ರಾಜರ ಆಂತರಿಕ ಆಡಳಿತ ದಬ್ಬಾಳಿಕೆ ಹಾಗೂ ಅದಕ್ಷತೆಯಿಂದ ಕೂಡಿತ್ತು

(D) ಮಾವೋವಿನ "ಸುದೀರ್ಘ ನಡೆ"ಯನ್ನು ದಮನ ಮಾಡಲು ಯತ್ನಿಸಿದರು

*ಉತ್ತರ :* ______________________

4. 1935 ರ ಭಾರತ ಸರ್ಕಾರದ ಶಾಸನವು ಭಾರತ ಸಂವಿಧಾನ ರಚನೆಯಲ್ಲಿ ಬಹುಮುಖ್ಯವಾದ ದಾಖಲೆಯಾಗಿದೆ ಏಕೆಂದರೆ

(A) ರಾಜ್ಯದಲ್ಲಿ ಜಾರಿಯಲ್ಲಿದ್ದ ದ್ವಿಮುಖ ಸರ್ಕಾರವನ್ನು ರದ್ದುಗೊಳಿಸಿತು

(B) ಭಾರತದಲ್ಲಿ ರಿಸರ್ವ್ ಬ್ಯಾಂಕನ್ನು ಸ್ಥಾಪಿಸಲಾಯಿತು

(C) ಇದು ಒಕ್ಕೂಟ ಪದ್ಧತಿಗೆ ಅವಕಾಶ ಮಾಡಿಕೊಟ್ಟಿತು

(D) ಪ್ರಾಂತ್ಯ ಸರ್ಕಾರಗಳು ಸ್ವಾಯತ್ತವಾದವು

*ಉತ್ತರ :* ______________________

www.careerindia.com

CAREERINDIA



5. ಜರ್ಮನಿಯ ಮೇಲೆ ಅಪಮಾನಕರವಾದ ಯುದ್ಧ ಪರಿಹಾರದ ಷರತ್ತುಗಳನ್ನು ಹೇರಿದ ಒಪ್ಪಂದ

(A) ವರ್ಸೈಲ್ಸ್ ಒಪ್ಪಂದ

(B) ಸೂರತ್ ಒಪ್ಪಂದ

(C) ಪ್ಯಾರೀಸ್ ಒಪ್ಪಂದ

(D) ಲಾಹೋರ್ ಒಪ್ಪಂದ

*ಉತ್ತರ :* ______________________________

6. 1952 ರಲ್ಲಿ ಕೇಂದ್ರ ಸರ್ಕಾರವು ಆಂಧ್ರ ಪ್ರದೇಶದ ರಚನೆಗೆ ಒಪ್ಪಿಗೆ ನೀಡಿದ್ದು

(A) ಪೊಟ್ಟಿ ಶ್ರೀರಾಮುಲು ಉಪವಾಸ ಮಾಡಿ ವಿಧಿವಶರಾದಾಗ

(B) ನಿಜಾಮನು ಯುದ್ಧ ಮಾಡಲು ಸಾಮಾಗ್ರಿಗಳನ್ನು ಆಮದು ಮಾಡಿಕೊಂಡಾಗ

(C) ಸರ್ದಾರ್ ಪಟೇಲರು ಪೊಲೀಸ್ ಕಾರ್ಯಾಚರಣೆ ನಡೆಸಿದಾಗ

(D) ರಾಜಾಕಾರರು ವಿಲೀನಕಾರರನ್ನು ದಮನಗೊಳಿಸಿದಾಗ

*ಉತ್ತರ :* ______________________________

7. ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಸಾರಿದ ಸಂವಿಧಾನದ ತಿದ್ದುಪಡಿ

(A) 42ನೇ ತಿದ್ದುಪಡಿ

(B) 93ನೇ ತಿದ್ದುಪಡಿ

(C) 73ನೇ ತಿದ್ದುಪಡಿ

(D) 74ನೇ ತಿದ್ದುಪಡಿ

*ಉತ್ತರ :* ______________________________

www.careerindia.com

CAREERINDIA



8. ವರದಕ್ಷಿಣೆ ವಿರೋಧಿ ಕಾನೂನನ್ನು ಜಾರಿಗೊಳಿಸಿದ ವರ್ಷ

(A) 1961

(B) 1978

(C) 1985

(D) 1976

ಉತ್ತರ : ______________________

9. ಸಾರ್ಕ್ ( SAARC ) ಒಕ್ಕೂಟದ ಗುರಿಯು

(A) ಪರಸ್ಪರ ಸಮಸ್ಯೆಗಳನ್ನು ಗುರುತಿಸಿ ಸಹಕಾರದಿಂದ ಪರಿಹಾರ ಕಂಡುಕೊಳ್ಳುವುದು

(B) ವಸಾಹತು ಶಾಹಿಗಳನ್ನು ನಿರ್ಮೂಲಗೊಳಿಸುವುದು

(C) ಮಧ್ಯ ಏಷ್ಯಾದಲ್ಲಿ ಶಾಂತಿ ಸ್ಥಾಪನೆ

(D) ಇತರ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳೊಂದಿಗೆ ಸಹಕರಿಸುವುದು

ಉತ್ತರ : ______________________

10. ಕಾಡುಗಳನ್ನು ಸಂರಕ್ಷಿಸುವುದು ಅತ್ಯವಶ್ಯಕವಾಗಿದೆ ಏಕೆಂದರೆ

(A) ಕಾಡುಗಳು ಪ್ರಮುಖ ಸಂಪನ್ಮೂಲವಲ್ಲ

(B) ಮಣ್ಣಿನ ಸವೆತವನ್ನು ತಡೆಗಟ್ಟುವುದಿಲ್ಲ

(C) ಅರಣ್ಯ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ

(D) ಇಂದು ಅನೇಕ ಪ್ರಾಣಿ, ಪಕ್ಷಿಗಳನ್ನು ಜನರು ನಾಡಿನಲ್ಲೇ ಸಾಕುತ್ತಿರುವರು

ಉತ್ತರ : ______________________

www.careerindia.com

CAREERINDIA



11. ವರ್ಗಾವಣೆ ಬೇಸಾಯ ಪದ್ಧತಿಯನ್ನು ಕರ್ನಾಟಕದಲ್ಲಿ ಈ ಹೆಸರಿನಿಂದ ಕರೆಯುತ್ತಾರೆ

    (A) ಪೊನಮ್

    (B) ಪೋಡು

    (C) ಕುಮರಿ

    (D) ಜೂಮಿಂಗ್

    *ಉತ್ತರ :* ______________________

12. ಪೆಟ್ರೋಲಿಯಂ ಅನ್ನು ''ದ್ರವರೂಪದ ಚಿನ್ನ'' ಎನ್ನಲು ಕಾರಣ

    (A) ಇದು ಸಕಲ ಆರ್ಥಿಕ ಚಟುವಟಿಕೆಯಲ್ಲಿ ಬಳಕೆಯಾಗುತ್ತದೆ

    (B) ಇದು ತುಂಬಾ ದುಬಾರಿಯಾದ ಶಕ್ತಿಮೂಲ

    (C) ಇದು ದ್ರವರೂಪದಲ್ಲಿ ಸಿಗುವುದರಿಂದ

    (D) ಇದು ಸಾಗರದ ತಳದಲ್ಲಿಯೂ ಸಿಗುವುದರಿಂದ

    *ಉತ್ತರ :* ______________________

13. ತಾಮ್ರವನ್ನು ಹೆಚ್ಚಾಗಿ ವಿದ್ಯುತ್ ಕೈಗಾರಿಕೆಗಳಲ್ಲಿ ಬಳಸಲು ಕಾರಣ

    (A) ಇದನ್ನು ಪುರಾತನ ನಾಗರಿಕತೆಗಳಲ್ಲಿ ಬಳಸುತ್ತಿದ್ದರು

    (B) ಇದನ್ನು ಗೃಹ ಬಳಕೆಯ ಪಾತ್ರೆಯ ತಯಾರಿಕೆಗೆ ಬಳಸುತ್ತಾರೆ

    (C) ಇದು ಅತ್ಯಂತ ಉತ್ತಮವಾದ ವಿದ್ಯುತ್ ಮತ್ತು ಉಷ್ಣವಾಹಕ

    (D) ಇದು ಬಹಳ ಹಗುರವಾದ ಲೋಹ

    *ಉತ್ತರ :* ______________________



www.careerindia.com

CAREERINDIA



14. ಕರ್ನಾಟಕದ ಪ್ರತಿ ಹೋಬಳಿಯಲ್ಲಿ 'ರೈತಮಿತ್ರ' ಎಂಬ ಯೋಜನೆ ಜಾರಿಗೆ ತರಲು ಕಾರಣ

(A) ಪರ್ಯಾಯ ಕೆಲಸವನ್ನು ರೈತರಿಗೆ ಒದಗಿಸುವುದು

(B) ರೈತರ ಸಮಸ್ಯೆಗಳನ್ನು ಬಗೆಹರಿಸಲು

(C) ರೈತರಿಗೆ ಆರ್ಥಿಕ ಸಹಾಯ ಒದಗಿಸಲು

(D) ಜೀತ ಪದ್ಧತಿ ನಿರ್ಮೂಲನ ಮಾಡಲು

*ಉತ್ತರ :* ____________________

15. ಸಣ್ಣ ಕೈಗಾರಿಕಾ ಸಂಶೋಧನಾಭಿವೃದ್ಧಿ ಮಂಡಳಿ ಸ್ಥಾಪನೆಯಾದ ಉದ್ದೇಶ

(A) ಕಚ್ಚಾವಸ್ತುಗಳನ್ನು ಒದಗಿಸುವುದು

(B) ಉತ್ಪನ್ನಗಳ ಗುಣಮಟ್ಟವನ್ನು ಉತ್ತಮಪಡಿಸುವುದು

(C) ವಸ್ತುಗಳ ಉತ್ಪಾದನೆಯ ಬಗ್ಗೆ ಮಾಹಿತಿ ಒದಗಿಸುವುದು

(D) ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಹೊಸ ಹೊಸ ಸಂಶೋಧನೆ ಕೈಗೊಳ್ಳುವುದು

*ಉತ್ತರ :* ____________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಬಂಗಾಳದಲ್ಲಿ ದ್ವಿಮುಖ ಸರ್ಕಾರವನ್ನು ಜಾರಿಗೆ ತಂದವರು ..........................................

17. ಮೈಸೂರಿನ ಜವಾಬ್ದಾರಿ ಸರ್ಕಾರದ ಮೊದಲ ಮುಖ್ಯ ಮಂತ್ರಿಯಾಗಿ ನೇಮಕವಾದವರು ............................

..........................................................................................

18. 'ತೃತೀಯ ಜಗತ್ತು' ಎಂಬ ಪದವನ್ನು ಬಳಕೆಗೆ ತಂದವರು ..........................................

19. ಸಟ್ಲೆಜ್ ನದಿಗೆ ಅಡ್ಡವಾಗಿ ನಿರ್ಮಿಸಲಾಗಿರುವ ಜಲಾಶಯವು ..........................................

20. ಜನರಿಗೆ ಬೇಕಾಗುವ ಅವಶ್ಯಕ ವಸ್ತುಗಳನ್ನು ವಿತರಿಸಲು ಸರ್ಕಾರವು ಸ್ಥಾಪಿಸಿದ ಅಂಗಡಿಗಳು ..........................

..........................................................................................

www.careerindia.com

CAREERINDIA



III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : $5 \times 1 = 5$

| | ***A* ಪಟ್ಟಿ** | | ***B* ಪಟ್ಟಿ** |
|---|---|---|---|
| a) | ಸತ್ಯಾರ್ಥ ಪ್ರಕಾಶ | i) | ದಂಡೋ ಕೇಶವ ಕರ್ವೆ |
| b) | ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯ | ii) | ದಯಾನಂದ ಸರಸ್ವತಿ |
| c) | ಕಾಶಿಯ ಕೇಂದ್ರೀಯ ಹಿಂದೂ ಕಾಲೇಜು ಬನಾರಸ್ | iii) | ಕ್ರಿ.ಶ. 1853 ರ ಶಾಸನ |
| d) | ಕೇಂದ್ರದಲ್ಲಿ ಪರಿಣಾಮಕಾರಿ ಶಾಸನ ಸಭೆಯ ಸ್ಥಾಪನೆ | iv) | ರೆಗ್ಯುಲೇಟಿಂಗ್ ಶಾಸನ |
| e) | ವಾರನ್ ಹೇಸ್ಟಿಂಗ್ಸ್ ಮೊದಲ ಗವರ್ನರ್ ಜನರಲ್ ಆದನು | v) | ಅನಿಬೆಸೆಂಟ್ |
| | | vi) | ಸ್ವಾಮಿ ವಿವೇಕಾನಂದ |
| | | vii) | ಕ್ರಿ.ಶ. 1813 ರ ಶಾಸನ |
| | | viii) | 1947 ರ ಭಾರತದ ಸ್ವಾತಂತ್ರ್ಯ ಶಾಸನ |

*ಉತ್ತರಗಳು :* a) ____________________

b) ____________________

c) ____________________

d) ____________________

e) ____________________

www.careerindia.com

CAREERINDIA



IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : 9 × 1 = 9

22. ಆಲಿಪ್ತ ಚಳುವಳಿಯ ಭಾರತದ ನಾಯಕನನ್ನು ಹೆಸರಿಸಿ.

23. ಅಮೆರಿಕಾದ ಗಾಂಧಿ ಎಂದು ಯಾರನ್ನು ಕರೆಯುತ್ತಾರೆ ?

24. ಮಹಾ ಕುಸಿತದಿಂದ ಅಮೆರಿಕಾ ಹೊರಬರಲು ಸಹಾಯಕವಾದ ಯೋಜನೆಯನ್ನು ಹೆಸರಿಸಿ.

25. ಮಾಂಗ್ರೋವ್ ಅರಣ್ಯಗಳ ವಿಶೇಷ ಲಕ್ಷಣಗಳೇನು?

26. ಭಾರತದ ಮೊಟ್ಟ ಮೊದಲ ಅಣುಸ್ಥಾವರವನ್ನು ಹೆಸರಿಸಿ.

www.careerindia.com

CAREERINDIA



27. ಮೊದಲನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ರಾಜ ಯಾರು ?

28. ಪ್ರಾಂತೀಯತೆ ಎಂದರೇನು ?

29. ವಿಶ್ವಸಂಸ್ಥೆಯ ಸಂಸತ್ತು ಎಂದು ಕರೆಯಲ್ಪಡುವ ಅಂಗ ಯಾವುದು ?

30. ಸುಖೀ ರಾಜ್ಯ ಎಂದರೇನು ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $16 \times 2 = 32$

31. ಕಂಠೀರವ ನರಸರಾಜ ಒಡೆಯರ ಸಾಧನೆಗಳೇನು ? ತಿಳಿಸಿ.

www.careerindia.com

CAREERINDIA



32. ಸಹಾಯಕ ಸೈನ್ಯ ಪದ್ಧತಿಯ ಶರತ್ತುಗಳಾವುವು ?

33. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ವೃತ್ತಪತ್ರಿಕೆಗಳು ಹೇಗೆ ಪ್ರಮುಖ ಪಾತ್ರವಹಿಸಿದವು ?

34. ಶಿವಪುರ ಧ್ವಜ ಸತ್ಯಾಗ್ರಹವನ್ನು ವಿವರಿಸಿ.

www.careerindia.com

CAREERINDIA



35. ಜುನಾಗಢ ಸಂಸ್ಥಾನ ಭಾರತದ ಒಕ್ಕೂಟಕ್ಕೆ ಹೇಗೆ ವಿಲೀನಗೊಂಡಿತು ?

36. ಒಂದನೆಯ ಮಹಾಯುದ್ಧದ ನಂತರ ಹಿಟ್ಲರ್ ಜರ್ಮನಿಯನ್ನು ಹೇಗೆ ಪುನರ್ ನಿರ್ಮಿಸಿದ ?

37. ಇಂಡೋನೇಷಿಯಾವು ಸ್ವಾತಂತ್ರ್ಯವಾದದ್ದು ಹೇಗೆ ?

www.careerindia.com

CAREERINDIA



38. ಲಾಭಕೋರತನವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಯಾವುದಾದರೂ ನಾಲ್ಕು ಕ್ರಮಗಳನ್ನು ತಿಳಿಸಿ.

39. ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದದ ಶರತ್ತು ಮತ್ತು ನಿಬಂಧನೆಗಳು ಏನು ?

40. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಕರಾವಳಿ ಪ್ರದೇಶಗಳು ಹೇಗೆ ಪ್ರಮುಖ ಪಾತ್ರವಹಿಸಿವೆ ?

www.careerindia.com

CAREERINDIA



41. ಭಾರತದ ವ್ಯವಸಾಯವನ್ನು 'ಮಾನ್‌ಸೂನ್' ಜೊತೆಯಲ್ಲಿ ಆಡುವ 'ಜೂಜಾಟ' ಎಂದು ಕರೆಯಲು ಕಾರಣಗಳೇನು ?

42. ವ್ಯವಸಾಯದ ಋತುಗಳು ಮತ್ತು ಭಾರತದ ಋತುಗಳ ವ್ಯತ್ಯಾಸ ತಿಳಿಸಿ.

43. ಅಂಚೆ ಕಚೇರಿಗಳು ಒದಗಿಸುವ ಸೇವೆಗಳು ಯಾವುವು ?

www.careerindia.com

CAREERINDIA



44. ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗಿರುವ ವ್ಯತ್ಯಾಸವನ್ನು ತಿಳಿಸಿ.

45. ಪ್ಯಾಕೇಜ್ ಕಾರ್ಯಕ್ರಮ ಮತ್ತು ಹಸಿರುಕ್ರಾಂತಿಗಳ ವ್ಯತ್ಯಾಸಗಳನ್ನು ತಿಳಿಸಿ.

46. ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.

www.careerindia.com

CAREERINDIA



VI. ಈ ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಪೋರ್ಚುಗೀಸರು ಭಾರತದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಲು ಅಸಮರ್ಥರಾದರು. ಏಕೆ ?

48. ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ತಿಳಿಸಿ.

www.careerindia.com

CAREERINDIA



49. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಕ್ಕುಗಳ ಸಂರಕ್ಷಣೆಗೆ ಕೈಗೊಂಡ ಕ್ರಮಗಳನ್ನು ತಿಳಿಸಿ.

50. ಮಣ್ಣಿನ ಸವೆತವನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

www.careerindia.com

CAREERINDIA



51. ಕೈಗಾರಿಕೀಕರಣದಿಂದಾಗುವ ದುಷ್ಪರಿಣಾಮಗಳೇನು ?

52. ಭಾರತದ ವಿದೇಶಿ ವ್ಯಾಪಾರದ ಪ್ರಮುಖ ಲಕ್ಷಣಗಳನ್ನು ತಿಳಿಸಿ.

www.careerindia.com

CAREERINDIA



VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಹತ್ತು** ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

53. ಸುಭಾಷ್ ಚಂದ್ರ ಬೋಸರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಇದನ್ನು ಸಮರ್ಥಿಸಿ.

www.careerindia.com

CAREERINDIA



54. ಭಾರತ ಹೇಗೆ ರಷ್ಯಾ ದೇಶದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದೆ. ವಿವರಿಸಿ.

www.careerindia.com

CAREERINDIA



55. ವ್ಯವಸಾಯವು ಭಾರತದ ಅರ್ಥ ವ್ಯವಸ್ಥೆಯ ಬೆನ್ನುಲುಬಾಗಿದೆ ಹೇಗೆ ? ವಿವರಿಸಿ.

www.careerindia.com

CAREERINDIA



VIII. 56. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೆಳಗೆ ಕೊಟ್ಟಿರುವ ಪ್ರದೇಶವನ್ನು ಗುರುತಿಸಿ : 1 + 3 = 4

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಮುಂಬೈ

c) ಅಮೃತಸರ್

www.careerindia.com

CAREERINDIA



**ಪರ್ಯಾಯ ಪ್ರಶ್ನೆ : ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ ( ಪ್ರಶ್ನೆ ಸಂಖ್ಯೆ 56ಕ್ಕೆ ಬದಲಾಗಿ )**

ಹಿಮಾಲಯ ಪರ್ವತದ ಕೆಲವು ಉಪಯೋಗಗಳನ್ನು ತಿಳಿಸಿ. 4

www.careerindia.com

www.careerindia.com